# 1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಕೆಆರ್ ನಗರ.

**ಸಿ.ಸಿ ನಂಃ 1060/2017**

| | | |
|---|---|---|
| ಸಾಕ್ಷಿಯ ಹೆಸರುಃ | ಆನಂದ ಎಸ್ | ಫ್ರಾಸಾಃ 05 |
| ತಂದೆಯ ಹೆಸರುಃ | ಸ್ವಾಮಿಗೌಡ | ಚಾಸಾಃ 04 |
| ವಯಸ್ಸುಃ | 49 ವರ್ಷ | ದಿಃ 02.02.2026 |
| ಉದ್ಯೋಗಃ | ಪೋಲಿಸ್ ಮುಖ್ಯ ಪೇದೆ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಕೆ.ಆರ್.ನಗರ. | |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ನಾನು ದಿನಾಂಕಃ 29.06.2012 ರಿಂದ 2016ರ ವರೆಗೆ ಹಾಗೂ ದಿನಾಂಕಃ 11.11.2024 ರಿಂದ ಇಲ್ಲಿಯವರೆಗೆ ನಾನು ಪೋಲೀಸ್ ಮುಖ್ಯ ಪೇದೆಯಾಗಿ ಸಾಲಿಗ್ರಾಮ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 01.10.2016 ರಂದು ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಮದ್ಯಾಹ್ನ 03.30 ಗಂಟೆಗೆ ಚಾಸಾ.12 ರವರು ನನ್ನನ್ನು ಮತ್ತು ಚಾಸಾ.5 ರವರನ್ನು ಕರೆದು ಚಾಸಾ.1 ರವರು ಸಮನ್ಸ್ ಜಾರಿ ಮಾಡುವ ಕರ್ತವ್ಯ ನಿರ್ವಹಿಸಿ ಮರಳಿ ಬರುತ್ತಿದ್ದಾಗ ಹಳೆ ಮಿರ್ಲೆ ಗ್ರಾಮದ ಸಮೀಪ ಅಕ್ರಮ ವಾಗಿ ಮದ್ಯ ಸಾಗಾಣಿಕೆ ಮಾಡುತ್ತಿದ್ದ ವ್ಯಕ್ತಿಯನ್ನು ಬೈಕ್ ಮತ್ತು ಮಧ್ಯದ ಸಮೇತ ಹಿಡಿದು ಕೊಂಡಿದ್ದು, ಸ್ಥಳಕ್ಕೆ ಹೋಗಿ ಪರಿಶೀಲಿಸಲು ನನ್ನನ್ನು ಮತ್ತು ಚಾಸಾ.5 ರವರನ್ನು ನಮ್ಮ ಇಲಾಖಾ ವಾಹನದಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಹಳೆ ಮಿರ್ಲೆ ಗ್ರಾಮದ ಸಮೀಪ ಚಾಸಾ.1 ರವರು ದ್ವಿಚಕ್ರ ವಾಹನ ಮತ್ತು ಮಧ್ಯದ ಬಾಕ್ಸ್ ಗಳನ್ನು ಹಾಗೂ ಆರೋಪಿಯಾದ ಹರೀಶ್ ರವರನ್ನು ತಮ್ಮ ಬಳಿ ನಿಲ್ಲಿಸಿದ್ದರು. ನಂತರ ಚಾಸಾ.12 ರವರು ದ್ವಿಚಕ್ರ ವಾಹನ ಮತ್ತು ಮಧ್ಯದ ಬಾಕ್ಸ್ ಗಳನ್ನು ಪರಿಶೀಲಿಸಿದ್ದು, ಆರೋಪಿ ಯಾದ ಹರೀಶ, ದ್ವಿಚಕ್ರ ವಾಹನ ಮತ್ತು ಮಧ್ಯದ ಬಾಕ್ಸ್ ಗಳ ಸಮೇತ ಠಾಣೆಗೆ ಬಂದಿರುತ್ತಾರೆ. ನಂತರ ಚಾಸಾ.2 ಮತ್ತು 3 ರವರನ್ನು ಚಾಸಾ.12 ರವರು ಬರ ಮಾಡಿಕೊಂಡು ಅವರಿಗೆ ಘಟನೆಯ ವಿಷಯವನ್ನು ತಿಳಿಸಿ, ಅಮಾನತ್ತು ಮಹಜರ್ ಕ್ರಮವನ್ನು ಜರುಗಿಸಿದ್ದು, ಜಪ್ತಿ ಪಡಿಸಿಕೊಂಡಿದ್ದ 6 ಬಾಕ್ಸ್ ಗಳ

ಪೈಕಿ ಐದು ಬಾಕ್ಸ್ ಗಳಲ್ಲಿ 90 ಎಂ.ಎಲ್ ನ ಒರಿಜಿನಲ್ ಡಿಲಕ್ಸ್ ವಿಸ್ಕಿಯ ಮದ್ಯಗಳು ಇದ್ದೆವು. ಇನ್ನೊಂದು ಬಾಕ್ಸ್ ನಲ್ಲಿ 180 ಎಂ.ಎಲ್ ನ ಒಲ್ಡ್ ಟವರೀನ್ ವಿಸ್ಕಿಯ ಮದ್ಯಗಳು ಇದ್ದೆವು. ನಂತರ ರಾಸಾಯನಿಕ ಪರೀಕ್ಷೆಗಾಗಿ ಪ್ರತಿ ಬಾಕ್ಸ್ ನಿಂದ ತಲಾ 5 ಪ್ಯಾಕೆಟ್ ಮದ್ಯಗಳನ್ನು ಮಾದರಿಯಾಗಿ ಪಡೆಯಲಾಗಿರುತ್ತದೆ. ನಂತರ ಮಾದರಿಯಾಗಿ ಪಡೆದ ಮದ್ಯಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ಸೀಲ್ ಮಾಡಿರುತ್ತೇವೆ. ನಂತರ ದ್ವಿಚಕ್ರ ವಾಹನ ಸಂಖ್ಯೆ: ಕೆ.ಎ-45-ಯು-7845 ಬಜಾಜ್ ಡಿಸ್ಕವರ್ ದ್ವಿಚಕ್ರ ವಾಹನವನ್ನು ಸಹ ಜಪ್ತಿ ಪಡಿಸಿಕೊಳ್ಳಲಾಗಿರುತ್ತದೆ.

ನ್ಯಾಯಾಲಯದಲ್ಲಿರುವ ಮುದ್ದೆ ಮಾಲುಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಾನು ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಆರೋಪಿಯು ಗೈರು ಹಾಜರಿದ್ದು, ಆರೋಪಿಯ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಮ್ಮ ಅರ್ಜಿಯಲ್ಲಿ ನಮೂದಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಟಿ.ಜಿ ವಕೀಲರಿಂದಃ**

1. ಸಾಕ್ಷಿಗೆ ಈಗ ನಿಪಿ.1ರ ಮಹಜರ್ ಅನ್ನು ತೋರಿಸಿ, ನಿಪಿ.1ರ ಮಹಜರ್ ಮಾಡುವ ಕಾಲಕ್ಕೆ ನೀವು ಹಾಜರಿದ್ದ ಬಗ್ಗೆ ನಿಪಿ.1ರಲ್ಲಿ ನಮೂದಾಗಿರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನಾನು ನಿಪಿ.1ರ ದಾಖಲೆಯನ್ನು ಗಮನಿಸಿರುವುದಿಲ್ಲ ಆದರೆ ನಿಪಿ.1ರ ಅಮಾನತ್ತು ಮಹಜರ್ ಆಗುವ ಕಾಲಕ್ಕೆ ನಾನು ಅಲ್ಲಿ ಹಾಜರಿದ್ದೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ನಿಪಿ.1ರಲ್ಲಿ ನನ್ನ ಹೆಸರು ನಮೂದಾಗಿರುವುದಿಲ್ಲ.

2. ಮುದ್ದೆ ಮಾಲು 1 ಮತ್ತು 2 ರ ಮೇಲೆ ಚಾಸಾ.12 ರವರು ನನ್ನ ಸಹಿಯನ್ನು ಪಡೆದಿರುವುದಿಲ್ಲ. ನಾನು, ಚಾಸಾ.12 ಮತ್ತು ಚಾಸಾ.5ರವರು ಘಟನಾ ಸ್ಥಳಕ್ಕೆ ಹೋಗಿದ್ದಾಗ ಘಟನಾ ಸ್ಥಳದಲ್ಲಿ ಸಾರ್ವಜನಿಕರು ಹಾಜರಿದ್ದರೋ ಇಲ್ಲವೋ ಎಂದು ನಾನು ಗಮನಿಸಿರುವುದಿಲ್ಲ. ಘಟನಾ ಸ್ಥಳದಲ್ಲಿ ಅಮಾನತ್ತು ಮಹಜರ್ ಅನ್ನು ಜರುಗಿಸಿರುವುದಿಲ್ಲ. ನಾನು ಹೇಳಿದ ಹಾಗೆ ಘಟನೆ ನೆಡೆದಿದ್ದರೆ ಘಟನಾ ಸ್ಥಳದಲ್ಲಿಯೇ ನಾವು ಅಮಾನತ್ತು ಮಹಜರ್ ಅನ್ನು ಜರುಗಿಸುತ್ತಿದ್ದೆವು ಹಾಗೂ ನಾನು ಹೇಳಿದ ಹಾಗೇ ಯಾವುದೇ ಘಟನೆ ನೆಡೆಯದಿದ್ದ ಕಾರಣ ಘಟನಾ ಸ್ಥಳದಲ್ಲಿ ನಾವು ಅಮಾನತ್ತು ಮಹಜರ್ ಅನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

3. ಆರೋಪಿಗೆ ತಮ್ಮದೇ ಆದ ಸ್ವಂತ ಬಾರ್ ಇದೆ ಎಂದರೆ ಸರಿ. ಚಾಸಾ.1 ರವರಿಗೂ ಮತ್ತು ಆರೋಪಿಗೂ ಬಾರ್ ನಲ್ಲಿ ಆದ ಜಗಳದ ಸಂಬಂಧ ಇರುವ ವೈಯಕ್ತಿಕ ವೈಷ್ಯಮ್ಯದಿಂದ ಆರೋಪಿಯ ವಿರುದ್ಧ ಚಾಸಾ.1 ರವರು ಹೂಡಿರುವ ಈ ಸುಳ್ಳು ಪ್ರಕರಣಕ್ಕೆ ಪೂರಕ ವಾಗುವಂತೆ ನಾನು ಸುಳ್ಳು ಸಾಕ್ಷ್ಯ ನುಡಿಯುದಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಿಂದ 6 ಬಾಕ್ಸ್ ಗಳನ್ನು ಮತ್ತು 2 ಚೀಲಗಳನ್ನು ವಶಪಡಿಸಿಕೊಂಡಿರುತ್ತೇವೆ. ನಿಪಿ.1 ರ ಅಡಿಯಲ್ಲಿ 6 ಬಾಕ್ಸ್ ಗಳು ಮತ್ತು 2 ಚೀಲಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ಸದರಿ ಬಾಕ್ಸ್ ಮತ್ತು ಚೀಲಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಪಂಚರ ಸಮಕ್ಷಮದಲ್ಲಿ ನಾವು ಯಾವುದೇ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಒಂದನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಕೆ.ಆರ್.ನಗರ**